†ಶ್ರೀ ಎಸ್. ನಿಜಲಿಂಗಪ್ಪ.—ಚನ್ನಗಿರಿ ತಾಲ್ಲೂಕಿನಲ್ಲಿ ಎರಡು ಕಾಲುವೆಗಳಿವೆ. ಮಲೆಬೇನ್ನೂರ್ ಭಾಗ ಎಂಬುದು ಒಂದು, ದಾವಣಗೆರೆ ಭಾಗ ಇನ್ನೊಂದು. ಎರಡೂ ಸೇರಿ ೧೬,೨೭೪ ಎಕರೆ ಗಳಲ್ಲಿ ಕಬ್ಬು ಆಗುತ್ತದೆ. ೬,೨೩೩ ಎಕರೆಯಲ್ಲಿ ಬತ್ತ ಆಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಆ ಪ್ರದೇಶದಲ್ಲಿ ಒಂದು ಲಕ್ಷ ಪ್ರಜಾನಂಖ್ಯೆಯಿದೆ. ಬೇರೆ ಯಾವ ಕೈಗಾರಿಕೆಯೂ ಅಲ್ಲಿಲ್ಲ. ೧೨,೦೦೦ ಎಕರೆಗಳಿಗೆ ಮೇಲ್ಪಟ್ಟು ಕಬ್ಬು ಬೆಳೆಯುವ ಪ್ರದೇಶವಿರುವುದರಿಂದ ಆ ಪ್ರದೇಶದಲ್ಲಿ ಸಹಕಾರ ತತ್ವದ ಮೇಲೆ ಒಂದು ಸಕ್ಕರೆ ಕಾರ್ಖಾನೆಯನ್ನು ಏರ್ಪಡಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕು, ದಾವಣಗೆರೆ, ಹೊನ್ನಾಳಿ, ಶಿವಮೊಗ್ಗ ಮುಂತಾದ ತಾಲ್ಲೂಕುಗಳಿಗೆ ಮಧ್ಯರಾಷ್ಟ್ರವೆಂಬುದು ತಮಗೆ ಗೊತ್ತಿದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಇರಬಹುದು.

ಶ್ರೀ ಡಿ. ಪರಮೇಶ್ವರಪ್ಪ.—೧೯೬೩ ನೆಯ ಇಸವಿಯೊಳಗೆ ೨೩,೦೦೦ ಎಕರೆಗಳು ನೀರಾವರಿಗೆ ಬರುತ್ತವೆಂದು ಹೇಳಿದ್ದಿರಿ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.-ಕಾಲುವೆ ತೆಗೆಯಬೇಕು.

Sri GANJI VEERAPPA.—When is this channel expected to be completed ?

Sri S. NIJALINGAPPA.—I have already said—round about the middle of the next year.

ಶ್ರೀ ಕುಂದೂರು ರುದ್ರಪ್ಪ.—ಆ ಪ್ರದೇಶದವರು ಕಾನೂನಿನ ಪ್ರಕಾರ ಮುಂದೆ ಬಂದರೆ ಸಕ್ಕರೆ ಕಾರ್ಖಾನೆಯನ್ನು ತೆರೆಯುವುದಕ್ಕೆ ಸಹಾಯ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಕೇಂದ್ರಸರ್ಕಾರದವರು ಹೊಸದಾಗಿ ಯಾವ ಸಕ್ಕರೆ ಕಾರ್ಖಾನೆಗೂ ಅವಕಾಶ ಕೊಡುವುದಿಲ್ಲ. ಅಂಥ ಅವಕಾಶ ಸಿಕ್ಕಿದಾಗ ಸಹಾನುಭೂತಿಯಿಂದ ಯೋಚಿಸುತ್ತೇನೆ.

Sri GANJI VEERAPPA.—Is it not a fact that by now some proposals to start sugar factories have already come before the Government, on a co-operative basis ?

Sri S. NIJALINGAPPA.—Quite a number of them have come.

Davangere-Bada-Santhebennur Road.

*Q.—200 **Sri KUNDUR RUDRAPPA** (Channagiri).—

Will the Government be pleased to state..—

(*a*) whether it is a fact that Davangere-Bada-Santhebennur road is a State Fund Road ;

(*b*) when it was converted as a State Fund Road ?

*A.— **Sri VEERENDRA PATIL** (Minister for Public Works).—

(*a*) Yes.

(*b*) On 1-3-1959.

ಶ್ರೀ ಕುಂದೂರು ರುದ್ರಪ್ಪ.—ದಾವಣಗೆರೆ ದೊಡ್ಡ ಸಿಟಿ ಅಲ್ಲವೇ ?

†ಶ್ರೀ ವೀರೇಂದ್ರ ಪಾಟೀಲ್.—ಇರಬಹುದು.

ಶ್ರೀ ಕುಂದೂರು ರುದ್ರಪ್ಪ.—ದಾವಣಗೆರೆಗೂ ನಂತೆಬನ್ನೂರಿಗೂ ಎಷ್ಟು ಮೈಲಿ ?

ಶ್ರೀ ವೀರೇಂದ್ರಪಾಟೀಲ್.—ಬಹುಶಃ 20 ಮೈಲಿ.

ಶ್ರೀ ಕುಂದೂರು ರುದ್ರಪ್ಪ.—ಇದು ಬಹಳ ಪ್ರಾಮುಖ್ಯವಾದ ರಸ್ತೆ ಅಲ್ಲವೆ ? ಇದನ್ನು ಉತ್ತಮ ಸ್ಥಿತಿಯಲ್ಲಿಡುವುದು ಅವಶ್ಯಕವಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಇದು D. L. B. ರಸ್ತೆಯಾಗಿತ್ತು. ಈಗ ಅದನ್ನು ಸ್ಟೇಟ್ ಫಂಡ್ ರೋಡ್ ಮಾಡಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಸ್ಟೇಟ್ ಫಂಡ್ ರಸ್ತೆಯೆಂದರೆ ಜನರ ಓಡಾಟಕ್ಕೆ ಅನುಕೂಲವಾದ ರಸ್ತೆ. ಸರಿಯಾದ ಸೇತುವೆ ಇಲ್ಲದೆ ಸ್ಟೇಟ್ ಫಂಡ್ ರಸ್ತೆಯಾಗಿ ಏನು ಪ್ರಯೋಜನ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಸಂಸ್ಥಾನದಲ್ಲಿ 7,205 ಮೈಲಿಗಳಷ್ಟು DLB ರಸ್ತೆಯನ್ನು State fund ರಸ್ತೆಯಾಗಿ ತೆಗೆದುಕೊಂಡಿದ್ದೇವೆ. ಅದನ್ನೆಲ್ಲಾ ಉತ್ತಮಪಡಿಸುವುದಕ್ಕೆ ಕೋಟ್ಯಂತರ ರೂಪಾಯಿ ಗಳಾಗುತ್ತವೆ. ಆದ್ದರಿಂದ ಕ್ರಮೇಣ ಪ್ರೋಗ್ರಾಂ ಹಾಕಿಕೊಂಡು ಪ್ರತಿಯೊಂದನ್ನು ಉತ್ತಮಪಡಿಸುತ್ತೇವೆ.

Sri GANJI VEERAPPA.—Is it not a fact that the road between Santhebennur and Bada is not fit for traffic ?

Sri VEERENDRA PATIL.—This is an all weather road.

Sri GANJI VEERAPPA.—Has any estimate been prepared to convert it as an all weather road and to construct a bridge near Tankan village ?

Sri VEERENDRA PATIL.—Sufficient expenditure has already been incurred in order to improve this road and two culverts have already been taken up and the work is in progress. One culvert is at 2/4 mile and the other is at 5/2 mile.

ಶ್ರೀ ಕುಂದೂರು ರುದ್ರಪ್ಪ.—ಈ ವಿಚಾರದಲ್ಲಿ ಎಸ್ಟಿಮೇಟ್ ತಯಾರಾಗಿ 5 ವರ್ಷಗಳಿಂದ ಮೂಲೆಗೆ ಬಿದ್ದಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಎರಡು ಹೈಲೆವಲ್ ಕಾಸ್‌ವೇ ಆಗುವುದು ಅವಶ್ಯಕವಾಗಿದೆ. 4 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಈಗಾಗಲೇ ಹೇಳಿದ ಹಾಗೆ 7500 ಮೈಲಿಗೆ ಮೇಲ್ಪಟ್ಟು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲಕ್ಕೂ ದುಡ್ಡು ಬೇಕು. ದುಡ್ಡಿನ ಅಭಾವ ಇದ್ದುದಕ್ಕೆ ಕೆಲಸ ಯಾವ ಒಂದು ತೀವ್ರತೆಯಿಂದ ಆಗಬೇಕೋ ಆ ತೀವ್ರತೆಯಿಂದ ಆಗುವುದಕ್ಕೆ ಸ್ವಲ್ಪ ಕಷ್ಟವಾಗಿದೆ.

ಶ್ರೀ ಕುಂದೂರು ರುದ್ರಪ್ಪ.—ಇದನ್ನು ಅದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ಮೂರು ರೆಕಾರ್ಡುಗಳು ಆಗಿವೆ. ಅದನ್ನು ಪರಿಶೀಲನೆ ಮಾಡಿ ಜಾಗ್ರತೆ ಕೆಲಸ ಪುರುವಾಡುತ್ತೀರಾ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಸಾಧ್ಯವಾದಷ್ಟು ಈ ಕೆಲಸ ಜಾಗ್ರತೆ ತೆಗೆದುಕೊಳ್ಳುವ ಸಲುವಾಗಿಯೇ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

Opening of the Filature section at Channapatna Government Spun Silk Mills.

*Q.—314. Sri B. J. LINGE GOWDA (Channapatna).—

Will the Government be pleased to state :—

(*a*) whether there are representations from the public to open the Filature Section at Channapatna Government Spun Silk Mills ;

(*b*) if so, the steps taken by the Government in the matter ?

A.—Sri R. DAYANANDA SAGAR (Deputy Minister for sericulture).—

(*a*) There are representations from a few.

(*b*) The experience elsewhere is that the filatures have not been working profitably. Therefore it was considered by the Government not desirable to start the filature section.

ಶ್ರೀ ಬಿ. ಜೆ. ಲಿಂಗೇಗೌಡ.—ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್‌ನಲ್ಲಿ ಮೊದಲು ಈ ಫಿಲೇಚರ್ಸ್‌ನಿಂದ ಹೆಚ್ಚು ಲಾಭ ಸಂಪಾದಿಸುತ್ತಾ ಇದ್ದುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ದಯಾನಂದಸಾಗರ್.—ಮೊದಲು ಕಂಪೆನಿಯವರು ನಡೆಸುತ್ತಾ ಇದ್ದಾಗ war purposeಗೆ ನಡೆಸುತ್ತಾ ಇದ್ದರು. ಬಹುಶಃ ಆಗ ದರಗಳು ಹೆಚ್ಚು ಇದ್ದು ಲಾಭ ಬಂದಿರಬಹುದು ಎಂದು ಕಾಣುತ್ತದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಯಾವಾಗ ಸ್ಪಾಮಿ ಕಂಪನಿ ಮುಚ್ಚಿದ್ದು ?

ಶ್ರೀ ಆರ್. ದಯಾನಂದಸಾಗರ್.—1948ರ ವರೆಗೂ ಇತ್ತು. ಆಮೇಲೆ ಮುಚ್ಚಿದ್ದಾರೆ.

ಶ್ರೀ ಜಿ. ವೆಂಕಟೇಗೌಡ.—ಖಾಸಗಿ ಸಂಸ್ಥೆಯವರಿಗೆ ಫಿಲೇಚರ್ಸ್ ಲಾಭ ಕೊಡುತ್ತಿದೆ ಎಂಬುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್. ದಯಾನಂದಸಾಗರ್.—ಸರ್ಕಾರ ದವರಿಗೆ ಅದು ಗೊತ್ತಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಚನ್ನಪಟ್ಟಣ ಸಿಲ್ಕ್ ಮಿಲ್‌ನಲ್ಲಿ ರೈತರಿಂದ ತಯಾರಾದ ಕಕೂನ್ ಕೊಂಡು ಕೊಳ್ಳಲು ಏನು ಅನುಕೂಲ ಮಾಡಿಕೊಟ್ಟಿದ್ದೀರಿ ?

ಶ್ರೀ ಆರ್. ದಯಾನಂದಸಾಗರ್.—ಅವರು ಏನು ಬೆಳೆಯುತ್ತಾರೋ ಅದನ್ನು ಕೊಂಡುಕೊಳ್ಳುತ್ತಾರೆ ಸರ್ಕಾರದವರು.

ಶ್ರೀ ಎಂ. ಸಿ. ಬಸಪ್ಪ.—ಅದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಆರ್. ದಯಾನಂದಸಾಗರ್.—ನೋಟೀಸ್.

Sri R. K. PRASAD.—Is profit-making the only consideration for starting a section in the industry ?

Sri R. DAYANAND SAGAR.—Profit making is not the only consideration for Government.

Sri R. K. PRASAD.—What are the other considerations ?

Sri R. DAYANAND SAGAR.—Government have got to encourage the silk industry in the State.

ಶ್ರೀ ಡಿ. ಎಂ. ಸಿದ್ದಯ್ಯ.—ಪ್ರಶ್ನೆಗೆ ಉತ್ತರವಾಗಿ ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿದ್ದೀರಿ. ಹಾಗೆ ಲಾಭದಾಯಕವಾಗಿ ಕೆಲಸ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದಸಾಗರ್.—ನಮಗೆ ಫಾರಿನ್ ಸಿಲ್ಕ್ ಬಹಳವಾಗಿ ಬರುತ್ತಿದೆ.

Sri G. VENKATAI GOWDA.—It is said that the "experience elsewhere is that the filatures have not been working profitably." May I know which filatures are not working profitably ?

Sri R. DAYANAND SAGAR.—Kollegal, Channapatna and Mysore.

Sri C. J. MUCKANNAPPA.—There were representations from some. What happened to those representations to open the silk filature at Channapatna ?

Sri R. DAYANAND SAGAR.—The representation has been considered and it is not found feasible to start it at Channapatna.

ಶ್ರೀ ಇ. ನಾರಾಯಣಗೌಡ.—ಈ ಫಿಲೇಚರ್ಸ್‌ನ್ನು ಯಾವಾಗ ಮುಚ್ಚಲಾಯಿತು ?

ಶ್ರೀ ಆರ್. ದಯಾನಂದಸಾಗರ್.—1948ರಲ್ಲಿ.

ಶ್ರೀ ಇ. ನಾರಾಯಣಗೌಡ.—ಎಷ್ಟುಜನ ಅದರಿಂದ ನಿರುದ್ಯೋಗಿಗಳಾಗಿದ್ದಾರೆ ?

ಶ್ರೀ ಆರ್. ದಯಾನಂದಸಾಗರ್.—ನೋಟೀಸ್.

ಶ್ರೀ ಟಿ. ಮಾದಯ್ಯಗೌಡ.—ಖಾಸಗಿಯವರು ಎಷ್ಟೋ ಜನ ಫಿಲೇಚರ್ಸ್ ನಡೆಸುತ್ತಾ ಇದ್ದಾರೆ. ಲಾಭದಾಯಕವಾಗಿದೆ.ಆದರೂ ಕೂಡ ಲಾಭದಾಯಕವಾಗಿಲ್ಲ ಎಂದು ಊಹೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ರೀಜಿಲ ನೇ ಇನವಿಯಲ್ಲ ಸರ್ಕಾರದವರು ಖಾಸಗೀ ಕ್ಷೇತ್ರದಿಂದ ಈ ಸ್ಪನ್‌ಸಿಲ್ಕ್ ಮಿಲ್‌ನ್ನು ತೆಗೆದುಕೊಂಡಿದ್ದಾರೆ. ಆ ಕಾಲದಲ್ಲಿ ಫಿಲೇಚರ್ ಸೆಕ್ಷನ್‌ನನ್ನು ಮುಂದುವರಿಸುವುದರಿಂದ ಬಹಳ ನಷ್ಟವಾಗುತ್ತದೆ ಎಂದು ಅಲ್ಲಿರತಕ್ಕ ಯಂತ್ರಗಳೆಲ್ಲವನ್ನೂ ಕೂಡ ಹರಾಜಿಗೆ ಇಡಬೇಕೆಂದು ೧೯೬೦ ರಲ್ಲಿ ತೀರ್ಮಾನ ತೆಗೆದುಕೊಂಡು ಯಂತ್ರಗಳನ್ನೆಲ್ಲಾ ತೆಗೆದಿದ್ದಾರೆ. ಹೊಸದಾಗಿ ಸ್ಥಾಪನೆ ಮಾಡಬೇಕೆಂದರೆ ಹಿಂದೆ ಇದ್ದ ಯಂತ್ರಗಳು ಪ್ರತಿಯೊಂದೂ ಬರಬೇಕಾಗಿದೆ. ಈಗ ಆ ಸೆಕ್ಷನ್‌ನನ್ನು ಮುಂದುವರಿಸಬೇಕೆಂದು ಸರ್ಕಾರ ಉದ್ದೇಶಪಟ್ಟಲ್ಲಿ ಈ ಒಂದು ತೊಂದರೆ ಇದೆ. ಅದನ್ನು ನಿವಾರಣೆ ಮಾಡುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಲಾಭದಾಯಕವಾಗಿ ಕೆಸಲ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?